ಗೆಳೆಯರನ್ನು ಹೇಗಾದರೂ ಮಾಡಿ ಕಾಪಾಡು. ಅವರ ಭವಿಷ್ಯವನ್ನು ಇಂದು ಹಾಳಾಗದಂತೆ ತಡೆದು ಕೃಪೆ ಮಾಡು' ಎಂದು ಮನದಲ್ಲಿ ಪ್ರಾರ್ಥಿಸುತ್ತಿದ್ದರು.

ಅಷ್ಟೊತ್ತಿಗೆ ಎರಡು ಮೂರು ವಾಹನಗಳು ಅಲ್ಲಿಗೆ ದೌಡಾಯಿಸಿ ಬಂದವು. ಎಲ್ಲರಿಗೂ ಆಶ್ಚರ್ಯ. ಯಾರು ಎಂದು ವಿಚಾರಿಸಲು ಅವರೆಲ್ಲ ಬಾಲ್ಯ ವಿವಾಹವನ್ನು ತಡೆಯುವ ಅಧಿಕಾರಿಗಳು ಎಂದು ಗೊತ್ತಾಯಿತು. ಅವರಿಗೆ ಹೇಗೋ ವಿಷಯ ತಿಳಿದಾಗಿತ್ತು. ಅಧಿಕಾರಿಗಳು ಪಾಲಕರನ್ನು ಕರೆಯಿಸಿ ಬುದ್ಧಿವಾದ ಹೇಳಿದರು. ಸರಕಾರದ ಕಾಯ್ದೆ ಕಾನೂನುಗಳ ಬಗ್ಗೆ ತಿಳಿ ಹೇಳಿದರು. ಬಾಲ್ಯವಿವಾಹ ಮಾಡುವುದರಿಂದ ವಿಧಿಸಬಹುದಾದ ಶಿಕ್ಷೆಯ ಬಗ್ಗೆ ಹಾಗೂ ಮಕ್ಕಳಿಗೆ ಉಂಟಾಗುವ ತೊಂದರೆಗಳ ಬಗ್ಗೆ ತಿಳಿಸಿ, ಮಕ್ಕಳು ಪ್ರಾಪ್ತ ವಯಸ್ಸಿಗೆ ಬರುವವರೆಗೂ ಮದುವೆ ಮಾಡಬಾರದೆಂದು ತಿಳಿಸಿದರು. ಪಾಲಕರಿಗೆ ತಮ್ಮ ತಪ್ಪಿನ ಅರಿವಾಯಿತು. ಅಧಿಕಾರಿಗಳ ಮಾತಿನಂತೆ ಮಕ್ಕಳು ಪ್ರಾಪ್ತ ವಯಸ್ಸಿಗೆ ಬರುವವರೆಗೂ ಮದುವೆ ಮಾಡುವುದಿಲ್ಲವೆಂದು ಪ್ರಮಾಣ ಪತ್ರ ಬರೆದುಕೊಟ್ಟರು. ಹಾಗೂ ಅವರ ವಿದ್ಯಾಭ್ಯಾಸಕ್ಕೆ ತೊಂದರೆ ಆಗದಂತೆ ಎಚ್ಚರ ವಹಿಸುವುದಾಗಿ ಅಧಿಕಾರಿಗಳಿಗೆ ಮಾತು ಕೊಟ್ಟರು.

ಮರುದಿನ ಶಾಲೆಯಲ್ಲಿ ಇದರ ಬಗ್ಗೆಯೇ ಚರ್ಚೆ. 'ಯಾರೋ ಅಧಿಕಾರಿಗಳಿಗೆ ಬಾಲ್ಯವಿವಾಹ ನಡೆಯುವ ಬಗ್ಗೆ ತಿಳಿಸಿದ್ದಾರೆ. ಒಳ್ಳೆಯ ಕೆಲಸವನ್ನೇ ಮಾಡಿದ್ದಾರೆ. ಅವರ ಬುದ್ಧಿವಂತಿಕೆಗೆ ಮೆಚ್ಚಲೇಬೇಕು' ಎಂದು ಗುರುಗಳು ಮಕ್ಕಳಿಗೆ ಹೇಳುತ್ತಿದ್ದರು.

ಗುರುಗಳು ತಮ್ಮ ಕೋಣೆಗೆ ಬಂದಾಗ ರಂಗ, ಸೋಮ ಮತ್ತು ಶಂಕರ ಬಂದು ನಡೆದ ಘಟನೆಯ ಬಗ್ಗೆ ಹೇಳಿದರು.

'ಗುರುಗಳೇ ಆಸ್ಪತ್ರೆ ಎದುರು ಭಿತ್ತಿ ಪತ್ರದಲ್ಲಿ ಬಾಲ್ಯವಿವಾಹದ ಕುರಿತು ಬರೆಯಲಾಗಿತ್ತು. ಅದನ್ನು ನಾವು ಓದಿದ್ದೆವು. ಅದರಲ್ಲಿ ಅಧಿಕಾರಿಗಳ ಫೋನ್ ಸಂಖ್ಯೆ ಇತ್ತು. ನಾವು ಅವರಿಗೆ ಕರೆ ಮಾಡಿ ವಿಷಯ ತಿಳಿಸಿದೆವು. ಕ್ಷಮಿಸಿ ಸರ್' ಎಂದರು. ಆಗ ಗುರುಗಳು 'ಮಕ್ಕಳೇ ನಿಮ್ಮ ಧೈರ್ಯವನ್ನು ಮೆಚ್ಚಲೇಬೇಕು. ನಿಮ್ಮನ್ನು ದಡ್ಡರು ಎನ್ನುವವರು ದಡ್ಡರು. ಸಮಾಜದಲ್ಲಿ ನಡೆಯುವ ಅನ್ಯಾಯಗಳ ವಿರುದ್ಧ ಪ್ರತಿಭಟಿಸುವ ಗುಣ ಬೆಳೆಸಿಕೊಳ್ಳಬೇಕು. ನಿಮಗೆಲ್ಲ ನನ್ನ ಕಡೆಯಿಂದ ಒಂದು ಪುಟ್ಟ ಬಹುಮಾನ ಸ್ವೀಕರಿಸಿ' ಎಂದು ಬಹುಮಾನ ನೀಡಿದರು. ■

# ಪಂಜರದ ಗಿಳಿ

■ ಡಾ. ಕೆ.ಬಿ. ರಂಗಸ್ವಾಮಿ

ಕಲೆ: ಸಂತೋಷ್ ಸಸಿಹಿತ್ಲು



ಪಂಜರದ ಗಿಳಿಯೊಂದು
ನನ್ನ ಕೂಗಿ ಕರೆಯಿತು
ಪಟಪಟನೆ ರೆಕ್ಕೆ ಬಡಿದು
ಸೀನ ಸೀನ ಎಂದಿತು

ಸನಿಹ ಹೋಗಿ ನಸುನಗುತ
ಗಿಣಿರಾಮ ಎಂದೆನು
ಮುದ್ದು ಮಾಡಿ ಕಾಳು ಚೆಲ್ಲಿ
ತಿನ್ನುವಂತೆ ಹೇಳಿದೆನು

ಪಿಳಿಪಿಳಿ ಕಣ್ಣುಬಿಡುತ
ಗಿಳಿಯು ನನ್ನ ನೋಡಿತು
ಸಪ್ಪೆ ಮೋರೆ ಹಾಕಿ ಮೆಲ್ಲ
ತನ್ನ ದುಃಖ ಅರುಹಿತು

ಅಪ್ಪ ಅಮ್ಮ ಬಂಧು ಬಳಗ
ಯಾರೂ ಇಲ್ಲ ಜೊತೆಯಲಿ
ಆಡಿ ಕುಣಿದು ಕುಪ್ಪಳಿಸಲು
ಗೆಳೆಯರಿಲ್ಲ ಪಂಜರದಲಿ

ಗಿಳಿಯ ಮಾತು ಕೇಳಿ
ನಾನು ಮೂಕನಾಗಿಬಿಟ್ಟೆನು
ಪಂಜರದೊಳಗೆ ನನ್ನ ನಾನು
ಕಲ್ಪಿಸಿಕೊಂಡು ನೊಂದೆನು

ಒಂಟಿತನದ ಕಷ್ಟವನ್ನು
ಸ್ವತಃ ಅರಿತುಕೊಂಡೆನು
ಮೆಲ್ಲನೆತ್ತಿ ಪಂಜರದ
ಬಾಗಿಲನ್ನು ತೆರೆದೆನು

ಪುಟ್ಟ ಹೆಜ್ಜೆ ಇಡುತ ಗಿಳಿಯು
ಹೊರಗೆ ನಡೆದು ಬಂದಿತು
ಥ್ಯಾಂಕ್ಯೂ ಸೀನ ಎನುತ
ಪುರ್ರನೆ ಹಾರಿಹೋಯಿತು ■



ಕುಂಚ ಪ್ರಪಂಚ



**ಶುಚಿ ವಿ. ಆರಾಧ್ಯ**
3ನೇ ತರಗತಿ, ದಿ ಗ್ರೇಟ್ ಈಸ್ಟರ್ನ್ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್, ಬೆಂಗಳೂರು